
# ಕುಟುಂಬದ ಆರೈಕೆ ಈಗ ರಂಗಕ್ಕನ ಹೊಣೆ

COVID-೧೯: ಭಾರತೀಯ ವಿಜ್ಞಾನಿಗಳ ಪ್ರತಿಕಿಯೆ
(ಒಂದು ಸ್ವಯಂಪ್ರೇರಿತ ಗುಂಪು)

IndiSciCovid

https://indscicov.in/

ವಿನ್ಯಾಸ: ರೇಷ್ಮಾ ಬರ್ವೆ



Indian Scientists' Response to COVID-19


ರಂಗಕ್ಕನಿಗೆ ತನ್ನ ಮಾವನದೇ ಚಿಂತೆ. ಮೊನ್ನೆಯಿಂದ ಇವರು ಬಹಳ ಜ್ವರ ಹಾಗೂ ಕೆಮ್ಮಿನಿಂದ ಬಳಲುತಿದ್ದಾರೆ. ಏನಾಗಿದೆಯೋ ಏನೋ!

ರಂಗಕ್ಕನ ಮಗಳು ಗೌರಿ ಆಗಾಗ್ಗೆ ತನ್ನ ತಾತನ ಹತ್ತಿರ ಹೋಗಿ ಜ್ವರ ಎಷ್ಟಿದೆಯೆಂದು ನೋಡಿಬರುತಿದ್ದಳು. ಅವಳಿಗೆ ತನ್ನ ತಂದೆ ತಂದಿದ್ದ ಉಷ್ಣಮಾಪಕ (ಥರ್ಮೋಮೀಟರ್) ಒಂದು ಆಟದ ವಸ್ತುವಾಗಿತ್ತು. ರಮೇಶನಿಗೆ ಈ ಥರ್ಮೋಮೀಟರ್ ಕೊಳ್ಳುವ ಯಾವುದೇ ಶೋಕಿ ಇರಲಿಲ್ಲ. ಮೊದಲೆಲ್ಲ ಹಣೆಯ ಮೇಲೆ ಕೈಯಿಟ್ಟು ಜ್ವರ ನೋಡುತ್ತಿರಲಿಲ್ಲವೇ? ಈಗಲೂ ಹಾಗೆ ಮಾಡಿದರಾಯಿತು ಎಂದು ರಂಗಕ್ಕನಿಗೆ ಎಷ್ಟೇ ಹೇಳಿದರು ಅದನ್ನು ಕೊಳ್ಳುವ ಹಠವನ್ನು ಅವಳು ಬಿಡಲಿಲ್ಲ. ಕೊನೆಗೂ ಮನೆಗೆ ಥರ್ಮೋಮೀಟರ್ ಬಂದಾಗಿತ್ತು! ಗಾಯದ ಮೇಲೆ ಬರೆ ಎಳೆದಂತೆ ಗೌರಿ ತನ್ನ ತಂದೆಗೆ ಉಪದೇಶವನ್ನೇ ಕೊಡಲು ಶುರುಮಾಡಿದಳು. “ಹಣೆಯಮೇಲೆ ಕೈ ಇಟ್ಟರೆ ಜ್ವರ ಇದೆಯೋ ಇಲ್ಲವೋ ಹೇಳಬಹುದಷ್ಟೆ! ನೋಡು, ಇದರಿಂದ ನಿಖರವಾಗಿ ಜ್ವರ ಎಷ್ಟಿದೆ, ಕಮ್ಮಿಯಾಗಿದೆಯೋ, ಜಾಸ್ತಿಯಾಗಿದೆಯೋ, ಎಲ್ಲವೂ ತಿಳಿಯುತ್ತೆ. ನಾವು ವೈದ್ಯರಿಗೂ ಸಹ ಸರಿಯಾಗಿ ತಿಳಿಸಬಹುದು.” ರಮೇಶನ ಹ್ಯಾಪೆಮುಖ ನೋಡುತಿದ್ದ ಮಗ ಸೂರಿ ತನ್ನ ಅಕ್ಕನ ಈ ಭೋದನೆಯನ್ನು ನೋಡಿ ಬೆರಗಾದ. ಅನೇಕ ಸಲ ಗೌರಿ ಹೀಗೆ ತನಗೆ ತಿಳಿದಿದ್ದನ್ನು ಹೇಳಿದಾಗಲೆಲ್ಲಾ ಅವನು “ನೀನೇನು ಡಾಕ್ಟ್ರಾ?” ಎಂದು  ಹೀಯಾಳಿಸುತಿದ್ದ. ಆದರೆ ರಂಗಕ್ಕನಿಗೆ ತನ್ನ ಹದಿನಾರು ವರ್ಷದ ಮಗಳ ಬುದ್ಧಿವಂತಿಕೆಯ ಬಗ್ಗೆ ಅಪಾರ ಹೆಮ್ಮೆ.




ರಂಗಕ್ಕನಿಗೆ ಈಗ ಒಂದೇ ಭಯ – ತನ್ನ ಮಾವನಿಗೇನಾದರೋ ಆ ಮಹಾಮಾರಿ "ಕೊರೊನ" ಅಂಟಿದ್ದರೆ? ಅಯ್ಯೋ ಈ ಕೊರೊನ ಮಾಡಿದ ಕಿತಾಪತಿ ಅಷ್ಟಿಷ್ಟಲ್ಲ! ಮನೆಗೆಲಸ ಮಾಡಿಕೊಂಡು ಸಂಸಾರ ತೂಗಿಸುತಿದ್ದ ರಂಗಕ್ಕ ಈಗ ಕೆಲಸವಿಲ್ಲದೇ ಮನೆಯಲ್ಲಿದ್ದಾಳೆ. ಅದೇನೋ "ಲಾಕ್ ಡೌನ್" ಅಂತೆ, ಎಲ್ಲಾ ಬಂದ್. ರಮೇಶನ ದರ್ಜಿ ಕೆಲಸಕ್ಕೂ ಬಿತ್ತು ಕೊಡಲಿ. ಈ ಚಿಕ್ಕ ಮನೆಯಲ್ಲೋ, ಆರು ಹಸಿದ ಹೊಟ್ಟೆಗಳನ್ನು ತೂಗಿಸಬೇಕು – ಇಬ್ಬರು ಮಕ್ಕಳು, ರಮೇಶನ ವಯಸ್ಸಾದ ತಂದೆ ತಾಯಿ, ಮತ್ತು ಇವರಿಬ್ಬರು. ಒಂದು ದೊಡ್ಡ ಕೋಣೆ, ಅಡುಗೆಮನೆ, ಬಚ್ಚಲು ಮತ್ತು ಶೌಚ – ಇದಿಷ್ಟೇ ಇರುವ ಇವರ ಮನೆ ಬೆಂಗಳೂರಿನ ಮಾರೇನಹಳ್ಳಿಯ ಒಂದು ಚಿಕ್ಕ ವಠಾರದಲ್ಲಿದೆ. ಅಲ್ಲೋ ಪ್ರತಿದಿನ ಸೊಳ್ಳೆ ಕಾಟ, ನೀರಿಗೂ ಒಳ್ಳೆಯ ವ್ಯವಸ್ಥೆ ಇಲ್ಲ ಮತ್ತು ಧೂಳೋ ಧೂಳು. ಇವರ ಪುಣ್ಯಕ್ಕೆ ಮನೆಯಲ್ಲೇ ಶೌಚವಿದೆ–ಹಲವೆಡೆ ಅಕ್ಕಪಕ್ಕದವರೊಂದಿಗೆ ಅದನ್ನೂ ಹಂಚಿಕೊಳ್ಳಬೇಕಾಗುತ್ತದೆ.

ಇಂತಹ ಕಷ್ಟದ ಸಮಯದಲ್ಲಿ ತಮ್ಮ ಚೂರುಪಾರು ಉಳಿತಾಯವೂ ಮಾಯವಾಗುತ್ತಿರುವಾಗ ಈ ಕೊರೊನ ಹಾವಳಿಯನ್ನು ಎಲ್ಲಿಂದ ಸುಧಾರಿಸೋದು? ರಂಗಕ್ಕನಿಗೆ ಇದೇ ದೊಡ್ಡ ತಲೆನೋವಾಗಿದೆ. ಮಾವನಿಗೆ ಈ ರೋಗ ಅಂಟಿದ್ದರೆ ಅದಕ್ಕೆ ಬೇಕಾಗುವ ಔಷಧಿ, ಆಸ್ಪತ್ರೆ ಖರ್ಚುಗಳು ಎಷ್ಟಾಗಬಹುದೋ? ಸರ್ಕಾರಿ ಆಸ್ಪತ್ರೆಗೆ ಸೇರಿಸಿದರೂ, ಅಲ್ಲಿ ಅಲ್ಪಸ್ವಲ್ಪ ಕೊಡದಿದ್ದರೆ ಏನೂ ಆಗುವುದಿಲ್ಲ. ಆಗೇನು ಗತಿ?



ಇಷ್ಟರ ಮೇಲೆ ಆಸ್ಪತ್ರೆಗೆ ಹೋಗುವುದಾದರೋ ಹೇಗೆ? ಬಸ್ಸು ಆಟೋ ಏನು ಇಲ್ಲ. ಆಂಬುಲೆನ್ಸ್ ನಮ್ಮಂತಹ ಬಡವರ ಮನೆಗೆ ಬಂದೀತೇ? ತನ್ನ ಕೆಲಸದ ಮನೆಯ ಒಡತಿಗೆ ಹುಷಾರಿಲ್ಲದಿದ್ದಾಗ ಆಂಬುಲನ್ಸ್ ಬಂದಿದ್ದನ್ನು ರಂಗಕ್ಕ ನೋಡಿದ್ದಳು. ಆದರೆ ತನ್ನ ಮನೆಯ ಪರಿಸ್ಥಿತಿ ಬೇರೆ. ಅಕಸ್ಮಾತ್ ಆಂಬುಲೆನ್ಸ್ ಬಂದು ಮಾವನನ್ನು ಆಸ್ಪತ್ರೆಗೆ ಕೊಂಡೊಯ್ದರೂ, ದಿನವೂ ಇವಳು ಊಟ ತಿಂಡಿ ಕೊಡಲು ಓಡಾಡುವುದು ಹೇಗೆ? ಸರ್ಕಾರ ಬಂದು ಊಟ ಗೀಟ ಕೊಡುತ್ತಾ? ಇವಳಿಗೆ ಆ ನಂಬಿಕೆಯಂತೂ ಇಲ್ಲ! ಸದ್ಯ ನಮ್ಮತ್ತೆಗೆ ಈ ರೋಗ ಬಂದಿಲ್ಲವಲ್ಲ, ಅವರು ಊಟ ತಿಂಡಿ ವಿಷಯದಲ್ಲಿ ಸ್ವಲ್ಪ ನಸಿನಸಿ, ಎಂದು ರಂಗಕ್ಕ ನಿಟ್ಟುಸಿರು ಬಿಟ್ಟಳು.

ರಂಗಕ್ಕನಿಗೆ ಒಂದು ಸಮಾಧಾನ--ಮಾವನಿಗೆ ಕೊರೊನ ಬಂದಿದ್ದರೂ ಆತಂಕದ ಸ್ಥಿತಿ ಏನೂ ಇಲ್ಲ. ಕೆಮ್ಮು ಜ್ವರ ಬಿಟ್ಟರೆ ಅವರು ಆರೋಗ್ಯವಾಗಿದ್ದಂತಿದೆ. ಕೆಮ್ಮು ಜ್ವರ ವರ್ಷದಲ್ಲಿ ಬೇಕಾದಷ್ಟು ಸಾರಿ ಬಂದಿಲ್ಲವೇ? ಹೀಗೆ ಯೋಚಿಸುತ್ತಿದ್ದಾಗ ತಕ್ಷಣ ಇವಳ ನೆನಪಿಗೆ ಬಂದಿದ್ದು ಡಾಕ್ಟರ್ ಮಾಲತಿ. ರಂಗಕ್ಕ ಮೊದಲು ಡಾಕ್ಟರ್ ಗೆ ಫೋನ್ ಹಚ್ಚಿದಳು. ತನ್ನ ಮಾವನ ಈ ಸ್ಥಿತಿ ವಿವರಿಸಿ ಮುಂದೇನು ಮಾಡಬೇಕು ಹೇಳಿ ಎಂದು ಕೇಳಿದಳು. ಡಾಕ್ಟರ್ ಮಾಲತಿ ಎಲ್ಲವನ್ನೂ ಕೂಲಂಕಷವಾಗಿ ಕೇಳಿ, ಸಮಾಧಾನದಿಂದ “ರಂಗಕ್ಕ ನಿನ್ನ ಮಾವನಿಗೆ ಕೊರೊನ ಪರೀಕ್ಷೆಯಂತೂ ಮಾಡಿಸಬೇಕು. ಆದರೆ ಅದಕ್ಕೇನು ಅವಸರವಿಲ್ಲ. ಈ ಮಹಾಮಾರಿಯಿಂದ ಆಸ್ಪತ್ರೆಗಳಲ್ಲಿ ಜನ ಜಾಸ್ತಿಯಾಗಿ ತುಂಬಿಹೋಗಿವೆ. ಒಂದೆರಡು ದಿನ ಅವರು ಸುಧಾರಿಸುತ್ತಾರೋ ನೋಡೋಣ. ಆದರೆ ಮೊದಲು ನೀನು ಎರಡು ಕೆಲಸಗಳನ್ನು ಮಾಡಬೇಕು. ಒಂದು, ನಿಮ್ಮ ಮಾವನಿಗೆ ಈ ಸೋಂಕು ಎಲ್ಲಿಂದ ಬಂದಿರಬಹುದೆಂದು ತಿಳಿದು ನನಗೆ ಹೇಳು. ಎರಡು, ನಿಮ್ಮ ಮಾವನನ್ನು ಖಡ್ಡಾಯವಾಗಿ ಮನೆಯಲ್ಲಿ ಬೇರೆಯವರಿಂದ ದೂರವಿಡು.”



ಡಾಕ್ಟರ್ ಮಾಲತಿ ಹೇಳಿದ್ದನ್ನು ಜೀರ್ಣಿಸಿಕೊಳ್ಳಲು ರಂಗಕ್ಕನಿಗೆ ಸ್ವಲ್ಪ ಸಮಯ ಹಿಡಿಯಿತು. ತನ್ನ ಮಗಳು ಗೌರಿಯನ್ನು ಕರೆದು ಮುಂದಿನ ಕ್ರಮಗಳನ್ನು ನಿರ್ಧರಿಸಿದಳು. ತನ್ನ ಅತ್ತೆಯನ್ನೂ ಕರೆದು ಇದನ್ನು ವಿವರಿಸಿದಳು. ಆ ಮುದುಕಿಗೆ ಇದೆಲ್ಲ ಎಷ್ಟು ತಿಳಿಯಿತೋ ಗೊತ್ತಿಲ್ಲ, ಆದರೆ ಹಿಂದೆ ಸಿಡಿಬು ಮಾರಿಯನ್ನು ನೋಡಿದ್ದ ಅವಳು ಈ ರೀತಿ ರೋಗಿಗಳನ್ನು ಎಲ್ಲರಿಂದ ಬೇರ್ಪಡಿಸುವ ಬಗ್ಗೆ ತಿಳಿದಿದ್ದಳು.

ಮನೆಯಲ್ಲಿ ಒಬ್ಬರು ಮಾತ್ರ ರೋಗಿಯ ಜೊತೆ ಸಂಪರ್ಕದಲ್ಲಿ ಇರಬೇಕು ಎಂದು ಡಾಕ್ಟರ್ ಮಾಲತಿ ಹೇಳಿದ್ದರಿಂದ ತಂದೆಯ ಸಂಪೂರ್ಣ ಆರೈಕೆಯ ಜವಾಬ್ದಾರಿ ರಮೇಶನ ಮೇಲೆ ಬಿತ್ತು. ರಂಗಕ್ಕ ಮನೆಯ ಎಲ್ಲಾ ಕೆಲಸಗಳನ್ನು ಮಾಡುತಿದ್ದು, ಮಕ್ಕಳಿಗೆ ತಲೆ ಬಾಚುವುದರಿಂದ ಅತ್ತೆಗೆ ಮಾತ್ರೆ ತರುವ ಕೆಲಸವೂ ಅವಳದ್ದಾಗಿತ್ತು. ರಮೇಶನಿಗಾದರೆ ಅಂಗಡಿಯ ಕೆಲಸವೂ ಇರಲಿಲ್ಲ! ಈಗ ಎಲ್ಲರೂ ಸೇರಿ ಮನೆಯನ್ನು ತಾತನಿಗೆ ಅನುಕೂಲವಾಗುವಂತೆ ಬದಲಿಸಲು ಮುಂದಾದರು.

೧. ತಾತನಿಗೆ ಮನೆಯಲ್ಲಿರುವ ಕೋಣೆಯನ್ನು ಬಿಟ್ಟುಕೊಟ್ಟರು. ಕೋಣೆಯಲ್ಲಿದ್ದ ಪ್ರತಿಯೊಂದು ವಸ್ತುವನ್ನು ಒರೆಸಲು ಒಂದು ಚೊಂಬಿನಲ್ಲಿ ಸಾಬೂನು ಹಾಗು ನೀರನ್ನು ಇಟ್ಟರು. ರಮೇಶನೂ ತನ್ನ ತಂದೆಯ ತಾಪಮಾನವನ್ನು ಆಗ್ಗಾಗ್ಗೆ ನೋಡಿ ಬರೆದಿಟ್ಟುಕೊಳ್ಳಬೇಕಾಯಿತು. ತಾತ ತನ್ನ ಮೊಣಕೈಯಿಂದ ಬಾಗಿಲು ಹಾಗೂ ಕಿಟಕಿಗಳನ್ನು ತೆಗೆದು ಹಾಗಬೇಕಾಯಿತು. ಅವರು ಮುಟ್ಟಿದ ಪ್ರತಿಯೊಂದು ವಸ್ತುವನ್ನು ಸಾಬೂನು ನೀರಿನಿಂದ ಒರೆಸುವ ಕೆಲಸ ಕೂಡ ರಮೇಶನದಾಯಿತು.




೨. ತಾತ ಶೌಚಕ್ಕೆ ಹೋಗುವ ಸಮಯವೊಂದನ್ನು ಬಿಟ್ಟು ಮಿಕ್ಕೆಲ್ಲ ಸಮಯವನ್ನು ಕೋಣೆಯಲ್ಲೇ ಕಳೆಯಬೇಕಾಯಿತು. ಅವರು ಹೊರಬಂದಾಗ ಮಿಕ್ಕೆಲ್ಲಾ ಸದಸ್ಯರು ಅವರಿಂದ ದೂರ ಸರಿಯುತಿದ್ದರು. ಸೂರಿಯು ಮನೆಯ ನೆಲದಮೇಲೆ ಬಳಪದಿಂದ ಗೆರೆಗಳನ್ನು ಎಳೆದು, ತಾತ ಎಲ್ಲಿ ನಡೆಯಬೇಕು ಮತ್ತು ಮಿಕ್ಕವರು ಎಲ್ಲಿ ನಿಲ್ಲಬೇಕು ಎಂದು ಘೋಷಿಸಿದನು. ನಾಳೆ ಮನೆ ಸಾರಿಸಿದಾಗ ಈ ಗೆರೆಗಳೆಲ್ಲವೂ ಮಾಯವಾಗುವುವು ಎಂದು ರಂಗಕ್ಕ ಯೋಚಿಸಿದರೂ ಸೂರಿಯ ಉತ್ಸಾಹವನ್ನು  ಕಂಡು ಏನೂ ಹೇಳಲಿಲ್ಲ.

೩. ರಮೇಶನು ತನ್ನ ತಂದೆಯೊಂದಿಗೆ ಶೌಚದ ನೈರ್ಮಲ್ಯತೆಯ ಬಗ್ಗೆ ಚರ್ಚಿಸಿದನು. ಅವರು ಶೌಚದ ಮನೆಯಲ್ಲಿ ಮುಟ್ಟಿದ ವಸ್ತುಗಳನ್ನು ಅವರು ಒರೆಸಿ ಹೊರಬರಬೇಕು. ನಂತರ ರಮೇಶನು ಮತ್ತೊಮ್ಮೆ ಎಲ್ಲವನ್ನೂ ಸ್ವಚ್ಛಗೊಳಿಸುವನು.

೪. ತಾತನ ಊಟವನ್ನು ಪ್ರತಿದಿನ ರಮೇಶ ಕೋಣೆಗೆ ತರುವನು. ಊಟವಾದ ನಂತರ ಅವರು ಒಮ್ಮೆ ನೀರಿನಲ್ಲಿ ತಮ್ಮ ತಟ್ಟೆ ಲೋಟ ತೊಳೆದು ಪಕ್ಕದಲ್ಲಿರುವ ಸಾಬೂನು ನೀರಿನ ಬಕೇಟಿನಲ್ಲಿ ಹಾಕಬೇಕು. ಅವರು ಮುಟ್ಟಿದ ಯಾವುದೇ ತಟ್ಟೆ ಚಮಚ ಅಥವಾ ಲೋಟವನ್ನು ರಮೇಶ ಮತ್ತೊಮ್ಮೆ ಪ್ರತ್ಯೇಕವಾಗಿ ತೊಳೆಯುವನು.

೫. ಮನೆಗೆ ಯಾರೂ ಹೊರಗಿನವರು ಬರುವಂತಿರಲಿಲ್ಲ. ಪಕ್ಕದ ಮನೆಯ ಕಾವೇರಿ ರಂಗಕ್ಕನ ಯೋಗಕ್ಷೇಮ ವಿಚಾರಿಸಲು ಬಂದಾಗ ಇವಳನ್ನು ರಂಗಕ್ಕ ಬಾಗಿಲಿನಲ್ಲೇ ಮಾತನಾಡಿಸಿ ಕಳುಹಿಸಿದಳು.



ಈಗ ಕೆಲಸ ಬಹಳಷ್ಟಿರುವುದರಿಂದ ಮನೆಯ ಇತರರಿಗೂ ಒಂದೊಂದು ಜವಾಬ್ದಾರಿ ಕೊಡಲಾಯಿತು.

೧. ಸೂರಿಯು ಅಡಿಗೆ ಮನೆಯ ಹೊರಗಿಟ್ಟಿರುವ ಬಟ್ಟೆಯಲ್ಲಿ ಮನೆಯ ಎಲ್ಲಾ ವಸ್ತುಗಳನ್ನು ಆಗ್ಗಾಗೆ ಒರಿಸಬೇಕು.

೨. ದಿನಕ್ಕೆ ಎರಡು ಸಲ ಗೌರಿಯು ಮನೆಯ ನೆಲವನ್ನಲ್ಲದೆ, ಕುರ್ಚಿ ಮೇಜನ್ನೂ  ಬ್ಲೀಚ್ ಮತ್ತು ಡೆಟಾಲ್ ಹಾಕಿ ಒರೆಸಬೇಕು.

೩. ಎಲ್ಲರೂ ತಮ್ಮ ತಮ್ಮ ಟವೆಲ್ (ಮೈ ಒರೆಸುವ ಬಟ್ಟೆ) ಹೇಗಿದ್ದರೂ ಉಪಯೋಗಿಸುತ್ತಿದ್ದರು; ಅವನ್ನು ನಿತ್ಯವೂ ಬಿಸಿಲಿನಲ್ಲಿ ಒಣಗಿಸಬೇಕು. ತಾತನ ಬಟ್ಟೆಗಳನ್ನು ಪ್ರತ್ಯೇಕಿಸಿ ಒಗೆಯುವ ಕೆಲಸ ರಂಗಕ್ಕನದು.

೪. ಗೌರಿಯು ಮನೆಯ ಸದಸ್ಯರಿಗೆಲ್ಲ ಒಂದೊಂದು ಮುಖಗವಸನ್ನು ಹೊಲೆದಳು. ತಾತನೊಂದಿಗೆ ಮಾತನಾಡುವಾಗ ಪ್ರತಿಯೊಬ್ಬರೂ ತಮ್ಮ ಮುಖಗವಸನ್ನುಧರಿಸಬೇಕು.

ಇಷ್ಟೆಲ್ಲಾ ಮುನ್ನೆಚ್ಚರಿಕೆಗಳೊಂದಿಗೆ ರಂಗಕ್ಕ ಸುಸ್ತಾಗಿ ನಿಟ್ಟುಸಿರೆಳೆದಳು. ತಮಗೆ ತೋಚಿದ್ದೇನೋ ಈ ಪರಿವಾರ ಮಾಡಿತ್ತು, ಆದರೆ ಈ ಕಷ್ಟದ ಪರಿಸ್ಥಿತಿಯಲ್ಲಿ ಸ್ವಲ್ಪ ಆದಾಯವಿದ್ದಿದ್ದರೆ ಸಹಾಯವಾಗುತಿತ್ತೋ ಏನೋ! ಉತ್ತರಿಸುವವರು ಯಾರು!?

ಇಲ್ಲಿ ಚಿತ್ರಿಸಿರುವ ಸನ್ನಿವೇಶಗಳು ಕೇವಲ ಕಾಲ್ಪನಿಕ ಮತ್ತು ಸಾಂದರ್ಭಿಕವಾಗಿರುತ್ತವೆ. ಇವುಗಳಲ್ಲಿ ಬಹಳಷ್ಟನ್ನು ನಿರೂಪಣೆಗಾಗಿ ಸರಳೀಕರಿಸಲಾಗಿದೆ. ಇದರ ಸಂಪೂರ್ಣ ವೈಜ್ಞಾನಿಕ ನಿಖರತೆಗೆ ಈ ಲೇಖನಗಳೊಂದಿಗಿರುವ ಇತರೆ ಜಾಲತಾಣಗಳನ್ನು ಹಾಗೂ ಲೇಖನಗಳನ್ನು ನೋಡಿ

